

# ವೀಕ್ಷಕರ ಎದೆ ತಟ್ಟುವ ಪಾತ್ರವೇ ಇಷ್ಟ!

**ನಿರುಷಾ ಗೌಡ**
ಸ್ಟಾರ್‌ಸುವರ್ಣದ 'ನಿನ್ನ ಜೊತೆ ನನ್ನ ಕಥೆ'ಯ ಭೂಮಿ

◆ **ಪೊಲೀಸ್ ಅಧಿಕಾರಿಗಿಂತ ಪೇದೆಯೇ ಆಗುವ ಹಟ ಹುಟ್ಟಿದ್ದು ಏಕೆ?**

ಅಮಾಯಕರ ಮೇಲೆ ರೌಡಿಗಳ ದಾಳಿ, ಕಳ್ಳತನ ಆಗುತ್ತಲೇ ಇರುತ್ತದೆ. ಅದನ್ನು ನಿಯಂತ್ರಿಸಿ, ಕಳ್ಳರ ವಿರುದ್ಧ ಕ್ರಮ ತೆಗೆದುಕೊಳ್ಳುವುದು ಆ ಕೆಲಸದ ಆದ್ಯತೆ. ಹಾಗಾಗಿಯೇ ಪೇದೆ ಆಗುವ ಆಸೆಯನ್ನು ಪ್ರಕಟಿಸುತ್ತೇನೆ. ಪೊಲೀಸ್ ಅಧಿಕಾರಿ ಇಲ್ಲವೇ ಬೇರೆ ಸಾಧ್ಯತೆಗಳು ಇದ್ದರೂ ನನಗೆ ಪೇದೆ ಆಗಬೇಕು ಎನ್ನುವುದು ಬಾಲ್ಯದ ಬಯಕೆ. ಈ ವಿಷಯದಲ್ಲಿ ಯಾರು ತಿಳಿ ಹೇಳಿದರೂ ಕೇಳುವ ಸ್ಥಿತಿಯಲ್ಲಿ ನಾನಿಲ್ಲ.

◆ **ಕಿರುತೆರೆಗೆ ಬಂದ ಆರಂಭದ ದಿನಗಳು ಹೇಗಿದ್ದವು?**

ಮೊದಮೊದಲ ದಿನಗಳೆಲ್ಲವೂ ಒಂದು ರೀತಿಯಲ್ಲಿ ಆಘಾತದ ಕ್ಷಣಗಳೇ ಆಗಿದ್ದವು. ಕ್ಯಾಮೆರಾ ಎದುರಿಸುವುದು ಭೀತಿಯನ್ನು ಹುಟ್ಟಿಸಿತ್ತು. ಪ್ರಜ್ಞಾಪೂರ್ವಕವಾಗಿ ಹೀಗೆ ಮಾಡಬೇಕು ಎನ್ನುವುದು ಕಸಿವಿಸಿಯನ್ನು ಉಂಟುಮಾಡುತ್ತಿತ್ತು. ಆದರೀಗ ಪರಿಸ್ಥಿತಿ ಉಲ್ಟಾ ಆಗಿದೆ. ವರ್ಷದಲ್ಲಿ ಒಂದು ದಿನವೂ ಬಿಡುವಿಲ್ಲದೆ ಕೆಲಸ ಮಾಡಲು ಸಿದ್ಧಳಿದ್ದೇನೆ. ಕೆಲಸವನ್ನು ಅಷ್ಟು ಎಂಜಾಯ್ ಮಾಡುತ್ತಿದ್ದೇನೆ. ಅಭಿನಯ ಲೋಕ ಎನ್ನುವುದು ಅಷ್ಟು ಖುಷಿಯನ್ನು ಕೊಟ್ಟಿದೆ.

◆ **'ಸ್ವಾತಿ'ಯಿಂದ 'ಭೂಮಿ'ಯ ತನಕ ಆದ ಬದಲಾವಣೆ ಏನು?**

ಎರಡೂ ಪಾತ್ರಗಳು ಸಂಪೂರ್ಣ ವಿರುದ್ಧ ನೆಲೆಯಲ್ಲಿ ನಿಲ್ಲುತ್ತವೆ. ಕಲರ್ಸ್ ಕನ್ನಡದಲ್ಲಿ ಬರುತ್ತಿದ್ದ 'ಗಂಡ ಹೆಂಡತಿ'ಯ ಸ್ವಾತಿ ಅಳುಮುಂಜಿಯಾಗಿದ್ದಳು. ಭೂಮಿ ಬಾಯಿಬಡಕಿ. ಮುಗ್ಧ ಹುಡುಗಿಯಾಗಿದ್ದ ಸ್ವಾತಿ, ಭೂಮಿ ರೂಪದಲ್ಲಿ ಬಜಾರಿಯಾಗಿದ್ದಾಳೆ. ಈಗ ಅವಳಿಗೆ ಹೊಸ ಸವಾಲು ಎದುರಾಗಿದೆ. ತೆರೆ ಮೇಲೆ ಪಾತ್ರ ಚೆನ್ನಾಗಿ ಕಾಣಿಸುತ್ತಿದೆ. ನಟಿಸಲು ತುಂಬ ಸಂತೋಷ ಅನ್ನಿಸುತ್ತದೆ.

◆ **ಮುಂದಿನ ಪಾತ್ರಗಳು?**

ಭಾವನಾತ್ಮಕ ಪಾತ್ರಗಳನ್ನು ಹಿಂದೆ ಮಾಡಿದ್ದರಿಂದ ಜೋರಾಗಿರುವ ಪಾತ್ರವನ್ನೇ ಮಾಡಬಯಸಿದ್ದೆ. ತಕ್ಕಮಟ್ಟಿನ ಬಜಾರಿ ಆಗಿದ್ದೇನೆ. ಮುಂದೆ ಈಗ ಹಳ್ಳಿಯ ಹುಡುಗಿಯ ಬಜಾರಿ ಗುಣವನ್ನು ಪ್ರದರ್ಶಿಸಬೇಕು ಎಂದುಕೊಂಡಿದ್ದೇನೆ. ಮೂಲತಃ ನಾನು ನಟಿ ಆಗುತ್ತೇನೆ ಎನ್ನುವ ಯೋಚನೆಯನ್ನೇ ಮಾಡಿರಲಿಲ್ಲ. ಆಕಸ್ಮಿಕವಾಗಿ ಬಂದಿದ್ದೇನೆ. ಇದಕ್ಕಾಗಿ ನಾನು ಪ್ರಯತ್ನವನ್ನೂ ಮಾಡಿಲ್ಲ. ಯಾರೋ ನನ್ನ ಫೋಟೊ ನೋಡಿ ಅವಕಾಶವನ್ನು ನೀಡಿದರು. ನನಗೆ ಮಾಡಬೇಕು ಅನ್ನುವ ಮನಸ್ಸು ಇರಲಿಲ್ಲ. ನಮ್ಮ ತಾಯಿಯ ಪ್ರೇರಣೆ ಕೂಡ ಪಾತ್ರ ಮಾಡಲ ಕಾರಣವಾಯಿತು ಎನ್ನಬಹುದು.

◆ **ಪಾತ್ರದ ಆಯ್ಕೆಯನ್ನು ಹೇಗೆ ಮಾಡಿಕೊಳ್ಳುತ್ತೀರಿ?**

ನನಗೆ ಕಥೆ ಮಾತ್ರ ಮುಖ್ಯ. ಪಾತ್ರಕ್ಕೆ ತೂಕ ಇರಬೇಕು. ಗ್ಲಾಮರ್ ಲುಕ್ ಕೊಟ್ಟು ಸುಂದರವಾಗಿ ಚಿತ್ರೀಕರಿಸುವುದು ಮುಖ್ಯ ಅಲ್ಲ. ನಾಯಕಿ ಅನ್ನಿಸಿದರೆ ಮಾತ್ರ ಸಾಲದು. ಪಾತ್ರ ವೀಕ್ಷಕರ ಮನದ ಬಾಗಿಲನ್ನು ತಟ್ಟಬೇಕು. ಅವರ ಎದೆಯಲ್ಲಿ ಒಂದಿಷ್ಟು ಕಾಲ ನೆಲೆಸುವಂತಹ ಗುಣ ಪಾತ್ರಕ್ಕೆ ಇರಬೇಕು. ಅಂತಹ ಕಥೆಗಳನ್ನೇ ಹುಡುಕುತ್ತೇನೆ. ಸೀರಿಯಲ್–ಸಿನಿಮಾ ಯಾವುದೇ ಆದರೂ ನೆಪಮಾತ್ರದ ಪಾತ್ರವನ್ನು ಮಾಡುವುದಿಲ್ಲ. ನಾಯಕಿ, ಇಲ್ಲವೇ ದೊಡ್ಡ ನಾಯಕ ಜೊತೆಗೆ ನಟಿಸುವ ಅವಕಾಶ ಎಂದು ಒಪ್ಪಲು ಆಗುವುದಿಲ್ಲ. ಚಿಕ್ಕ ಪಾತ್ರವೇ ಆದರೂ ಜನರ ಮನಸಿಗೆ ಅದು ಮುಟ್ಟಬೇಕು.

◆ **ಧಾರಾವಾಹಿಯಲ್ಲಿ ಕ್ರೈಮ್ ಹೆಚ್ಚಾಗುತ್ತಿದೆ ಎನ್ನುವುದಕ್ಕೆ ಏನು ಹೇಳುತ್ತೀರಿ?**

ಪೊಲೀಸ್ ವ್ಯವಸ್ಥೆಯನ್ನು ಪರಿಚಯಿಸುವ ಕಾರಣಕ್ಕೆ ಹಾಗೆ ಅನ್ನಿಸಬಹುದು. ನಮ್ಮ ಸಮಾಜದಲ್ಲಿ ಇದೇ ರೀತಿ ಇದೆ. ಮನೆಯಲ್ಲಿ ದ್ವೇಷ ಇರುತ್ತೆ, ಅಕ್ಷರಶಃ ವಿಷ ಹಾಕಲ್ಲ. ಆ ರೀತಿಯ ದ್ವೇಷದ ಮೂಲವೇ ವಿಷದಂತೆ ಎನ್ನುವ ಸೂಕ್ಷ್ಮವನ್ನು ಹೇಳಬೇಕಾಗಿದೆ. ಎಲ್ಲರ ಮನೆಯಲ್ಲಿ ನಡೆಯುವುದೇ ಧಾರಾವಾಹಿ ಆಗುತ್ತದೆ. ಬಹುತೇಕರು ತೊಂದರೆ ಕೊಡಲು ಹೊಂಚು ಹಾಕುವುದನ್ನೇ ತೋರಿಸುವುದು. ಇದರಿಂದ ಸಮಾಜಕ್ಕೆ ತಪ್ಪು ಸಂದೇಶ ಕೊಟ್ಟಂತೆ ಆಗುತ್ತದೆ ಎಂದಲ್ಲ. ಆ ರೀತಿಯ ಮನೋಸ್ಥಿತಿಗಳನ್ನು ಅನಾವರಣ ಮಾಡುವುದು ಇದರ ಹಿಂದಿನ ಉದ್ದೇಶ ಎಂದು ಭಾವಿಸುವೆ.

◆ **ನಿಮ್ಮ ಬಾಲ್ಯವನ್ನು ನೆನಪಿಸಿಕೊಳ್ಳಬಹುದಾ?**

ನಾನು ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದಿದ್ದೇನೆ. ಅಪ್ಪ ಮಧುಕುಮಾರ್, ಅಮ್ಮ ಪದ್ಮಾ ಇಬ್ಬರೂ ಸಿವಿಲ್ ಎಂಜಿನಿಯರ್. ನಾನು ವೃತ್ತಿಪರ ಕಥಕ್ ಡಾನ್ಸರ್. ರಾಮಯ್ಯ ಕಾಲೇಜಿನಲ್ಲಿ ಬಿ.ಸಿ.ಎ. ಓದುವಾಗ ಒಂದು ಕಾರ್ಯಕ್ರಮವನ್ನು ನೀಡಿದ್ದೆ. ಆಗ ಯಾರೋ ಫೋಟೊ ತೆಗೆದುಕೊಂಡಿದ್ದಾರೆ. ಆ ಮೂಲಕ ಬೇರೆ ಭಾಷಾ ಸಿನಿಮಾಕ್ಕೆ ಅವಕಾಶವನ್ನೂ ನೀಡಿದರು. ಅಮ್ಮ ಕನ್ನಡಕ್ಕೆ ಆದ್ಯತೆ ಕೊಡಲು ಹೇಳಿದರು. ಆ ಫೋಟೊ ಒಬ್ಬರಿಂದ ಮತ್ತೊಬ್ಬರಿಗೆ ಹೋಗಿ ಮತ್ತೆ ಅವಕಾಶ ಹುಡುಕಿಕೊಂಡು ಬಂತು. 'ಸಿರಿ ಕನ್ನಡ' ಮೊದಲ ಅವಕಾಶದಲ್ಲಿ ಒಳ್ಳೆಯ ಪಾತ್ರ ನನ್ನ ಪಾಲಿಗೆ ಸಿಕ್ಕಿತ್ತು.ಅದಾದ ಮೇಲೆ 'ಗಂಡ ಹೆಂಡತಿ', ಈಗ ಇದಕ್ಕೆ ಇನ್ನೂರು ಜನ ಆಡಿಷನ್ ಕೊಟ್ಟಿದ್ದರಂತೆ. ನಾನು ಒಂದೇ ಲುಕ್ ಟೆಸ್ಟ್‌ಗೆ ಆಯ್ಕೆಯಾದೆ.

**■ ರಾಘವೇಂದ್ರ ಕೆ.**